ದಿನಾಂಕ ೨ ಜನವರಿ ೨೦೨೫ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಶ್ರೀ ಶಿವರಾಮ ಕೋ-ಆಪ್ ರೇಟಿವ್ ಬ್ಯಾಂಕ್ ಬಸವನಗರ ಬೆಳಗಾವಿ. ಇಲ್ಲಿ ಖಾಲಿ ಇರುವ ಗುಮಾಸ್ತ ಹುದ್ದೆಗೆ ಅರ್ಜಿ ಕರೆದಿದ್ದು ನೀವು ಹುಬ್ಬಳ್ಳಿಯ ರಮೇಶ. ಸಿ ಎಂದು ಭಾವಿಸಿ ಆ ಬ್ಯಾಂಕಿನ ವ್ಯವಸ್ಥಾಪಕರು ಇವರಿಗೆ ಒಂದು ಅರ್ಜಿ ಸಲ್ಲಿಸಿರಿ.

ದಿನಾಂಕ : ೦೭.೦೧.೨೦೨೫

ಸ್ಥಳ : ಹುಬ್ಬಳ್ಳಿ

ಇವರಿಂದ,

ರಮೇಶ. ಸಿ,

ವಿವೇಕ ನಗರ,

ಹುಬ್ಬಳ್ಳಿ - ೫೨೦೦೪೫

ಇವರಿಗೆ,

ವ್ಯವಸ್ಥಾಪಕರು,

ಶ್ರೀ ಶಿವರಾಮ ಕೋ-ಆಪ್ ರೇಟಿವ್ ಬ್ಯಾಂಕ್,

ಬಸವನಗರ, ಬೆಳಗಾವಿ.

ಮಾನ್ಯರೇ

ವಿಷಯ: ಗುಮಾಸ್ತ ಹುದ್ದೆಗೆ ಅರ್ಜಿ

ದಿನಾಂಕ ೨.೧.೨೦೨೫ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ತಮ್ಮ ಸಂಸ್ಥೆಯಲ್ಲಿ ಖಾಲಿ ಇರುವ ಗುಮಾಸ್ತ ಹುದ್ದೆಗೆ ನಾನು ಅರ್ಹನಾಗಿದ್ದು, ಈ ಅರ್ಜಿ ಸಲ್ಲಿಸುತ್ತಿದ್ದೇನೆ. ನನ್ನ ಬಗೆಗೆ ಸಂಪೂರ್ಣ ಸ್ವ-ವಿವರ ಮಾಹಿತಿ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಶೈಕ್ಷಣಿಕ ವಿದ್ಯಾರ್ಹತೆ	ಪಾಸಾದ ವರ್ಷ	ಸಂಸ್ಥೆ/ವಿಶ್ವವಿದ್ಯಾಲಯ	ಶೇಕಡಾವಾರು ಅಂಕಗಳು
1.	ಎಸ್.ಎಸ್.ಎಲ್.ಸಿ	ಏ. 2005	ಕೆ.ಎಸ್.ಇ.ಇ.ಬೋರ್ಡ್	71%

2.	ಪಿ.ಯು.ಸಿ	ಏ. 2007	ಪಿ.ಯು.ಬೋರ್ಡ್	73%
3.	ಬಿ.ಕಾಂ	ಏ. 2010	ಕರ್ನಾಟಕ ವಿಶ್ವ ವಿದ್ಯಾಲಯ	75%
4.	ಬಿ.ಸಿ.ಎ	ಜೂ. 2013	ಕರ್ನಾಟಕ ವಿಶ್ವ ವಿದ್ಯಾಲಯ	77%
5.	ಎಂ.ಕಾಂ	ಜು. 2016	ಕುವೆಂಪು ವಿಶ್ವವಿದ್ಯಾಲಯ	70%

ನನಗೆ ಎರಡು ವರ್ಷಗಳ ಕಾಲ ಸ್ಥಳೀಯ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿದ್ದೇನೆ. ನನ್ನ ಎಲ್ಲ ಶೈಕ್ಷಣಿಕ ಅರ್ಹತೆಗಳ ನಕಲು ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿದ್ದೇನೆ. ದಯಾಳುಗಳಾದ ತಾವು ತಮ್ಮ ಸಂಸ್ಥೆಯಲ್ಲಿ ಸೇವೆ ಮಾಡಲು ಅವಕಾಶ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳು

ಇಂತಿ ತಮ್ಮ ಸೇವಾಕಾಂಕ್ಷಿ

(ರಮೇಶ ಸಿ)